Reg No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೪-೮-೦.

ಸಂಪುಟ ೨೩ | ತಾರೀಕು ೧೧—೫—೧೯೪೫ನೇ ಶುಕ್ರವಾರ. | ಸಂಚಿಕೆ ೪೮

ಜರ್ಮನಿಯ ವೀರ ನಾಯಕನು ಕಣ್ಮರೆಯಾದ.

ಹಿಟ್ಲರನು ಸತ್ತನು. ಕೊನೆಗೊಮ್ಮೆ ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ಏಕ? ಜಗತ್ತಿನ ಶಾಂತಿಗೇ ಭಂಗ ತರುತ್ತಿರುವವನೆಂದು ಸಂಯುಕ್ತ ರಾಷ್ಟ್ರಗಳಿಂದ ಬೊಟ್ಟುಮಾಡಿ ತೋರಿಸಿ ಪಲಾಯನಮಾಡಲ್ಪಡುತ್ತಿದ್ದ ಇಂದಿನ ಜರ್ಮನಿಯ ನಾಯಕನು ಇಹಲೋಕದಿಂದ ಕಣ್ಮರೆಯಾದನು. ಐರೋಪ್ಯ ಯುದ್ಧವು ಕೊನೆಗೊಂಡಂತಾಯಿತು. ಶಾಶ್ವತ ಶಾಂತಿಸ್ಥಾಪನೆಗೆ ಕಂಟಕಪ್ರಾಯನಾಗಿದ್ದನೆಂದು ಹೇಳಲ್ಪಡುತ್ತಿದ್ದ ಹಿಟ್ಲರನ ಮರಣಾನಂತರವಾದರೂ ಸಂಯುಕ್ತ ರಾಷ್ಟ್ರದವರು ಈ ಶಾಂತಿಯನ್ನು ಸ್ಥಾಪಿಸಲು ಯತ್ನಿಸುವರೇ? ಅವರಿಂದ ಸಾಧ್ಯವೇ? ಎಂಬುದನ್ನು ನೋಡತಕ್ಕದ್ದಿದೆ.

ಏನೇ ಇರಲಿ, ಹಿಟ್ಲರನ ಹೆಸರು ಜಗತ್ತಿನಲ್ಲಿ ಚಿರಸ್ಥಾಯಿಯಾಗಿ ಉಳಿಯದಿರದು. ಸಂಯುಕ್ತ ರಾಷ್ಟ್ರಗಳ ಮುತ್ಸದ್ದಿಗಳಿಗೆ ಹಿಟ್ಲರನ ಧೋರಣೆಯು ಸರಿಬೀಳಲಿಲ್ಲ. ಆದರಲ್ಲಿ ಆಶ್ಚರ್ಯವಿಲ್ಲ. ತನ್ನ ಆಭಿಪ್ರಾಯವುಂಟು ಇತರರೊಂದಿಗೆ ಭಿನ್ನಾಭಿಪ್ರಾಯವುಂಟು ಗುರುದು ಸ್ವಾಭಾವಿಕ. ಆದರೆ ಜರ್ಮನರ ದೃಷ್ಟಿಯಿಂದ, ಜರ್ಮನ ಸ್ವಾಭಿಮಾನದ ದೃಷ್ಟಿಯಿಂದ, ಹಿಟ್ಲರನಂತಹ ವೀರನು ಜರ್ಮನಿಯಲ್ಲಿ ಇನ್ನು ಪರಿಗೆ ಹುಟ್ಟಿಲ್ಲವೆಂದು ಹೇಳಬಹುದು. ನಿಷ್ಕಾಮ ದೇಶಪ್ರೇಮ, ಸ್ವಾಭಿಮಾನ, ಸ್ವಾರ್ಥತ್ಯಾಗ ಇವುಗಳಿಂದ ತುಂಬಿ ತುಳುಕುತ್ತಿದ್ದ ಹಿಟ್ಲರನು ಜರ್ಮನಿಗಾಗಿ—ತನ್ನ ರಾಷ್ಟ್ರಕ್ಕಾಗಿ—ಕೊನೆಯ ತ್ಯಾಗವನ್ನು ಮಾಡಿ ಮುಗಿಸಿದನು. ರಣರಂಗದಲ್ಲಿ ಜೀವವನ್ನಿಟ್ಟು ತನ್ನ ಜನತಾಂಗಕ್ಕಾಗಿ ಅಂತಿಮ ಸೇವೆಯನ್ನು ಸಲ್ಲಿಸಿದನು.

ಜಾಗತಿಕ ಯುದ್ಧವು ಹಿಟ್ಲರನಿಂದ ಪ್ರಾರಂಭಿಸಲ್ಪಟ್ಟಿತೆಂದುಹೇಳಲಾಗುತ್ತಿದೆ. ಇದು ನಿಜ. ಹಿಂದಿನ ಮಹಾಯುದ್ಧದನಂತರ ಆದ ವರ್ಸೇಲ್ಸ್ ಒಪ್ಪಂದದ ವೇಳೆಗೆ ಸಂಯುಕ್ತರಾಷ್ಟ್ರದವರು ಜರ್ಮನಿಯನ್ನು ಅಷ್ಟೊಂದು ನಿಕೃಷ್ಟವಾಗಿ ನಡೆಸಿಕೊಂಡಿರದಿದ್ದರೆ ಈ ಯುದ್ಧವೇ ಆಗುತ್ತಿರಲಿಲ್ಲ ಎಂಬ ಸಂಶಯವು ತಲೆದೋರುವುದು. 'ಜಗತ್ತಿನ ಇತರ'ರಾಷ್ಟ್ರಗಳು ಜರ್ಮನಿಯನ್ನು ಸರಿಸಮಾನವೆಂದು ಭಾವಿಸಿ ಅದರಂತೆ ನಡೆಸಿಕೊಂಡಿರೆ ಜರ್ಮನಿಯಂತೆ ಬೇರೆ ವಿಶ್ವ ರಾಷ್ಟ್ರವು ಅವುಗಳಿಗೆ ದೊರೆಯಲಾರವು ಎಂದು ಹಿಟ್ಲರನ ಸ್ಪಷ್ಟ ಶಬ್ದಗಳಲ್ಲಿ ಅಂದಿದ್ದನು. ಆದರೆ ಸಮಾನತೆಯ ದೃಷ್ಟಿಯನ್ನು ಸಂಯುಕ್ತ ರಾಷ್ಟ್ರಗಳು ಜರ್ಮನಿಯತ್ತ ಬೀರದ್ದರಿಂದ ಮತ್ತು ಪ್ರಾರಂಭದಲ್ಲಿ ಹಿಟ್ಲರನನ್ನೊಲಿಸಿಕೊಳ್ಳಲು ಅವನು ಮಾಡುತ್ತಾ ಬಂದ ಅಸಂಖ್ಯಾತ ಧಗಳನ್ನು ಮುರ್ಖತ್ವದಿಂದ ಒಂದಾದ್ದರಿಂದ ಅವನಿಗೆ ಅದಕ್ಕೂ ಘೋರತರವಾದ ಅಪರಾಧಗಳನ್ನು ಮಾಡಲು ಸಂಯುಕ್ತ ರಾಷ್ಟ್ರಗಳು ಅಪ್ರತ್ಯಕ್ಷವಾಗಿ ಪ್ರೋತ್ಸಾಹ ಕೊಟ್ಟಂತಾಯಿತು. ಮತ್ತು ಈ ಯುದ್ಧವು ಪ್ರಾರಂಭವಾಗಲು ಕಾರಣವಾಯಿತು. ಎಂದು ಹೇಳಿ ಜಗತ್ತಿಕ ಯುದ್ಧಕ್ಕೆ ಹಿಟ್ಲರನನ್ನೇ ಸಂಯುಕ್ತ ರಾಷ್ಟ್ರಗಳೂ ಕಾರಣಗಳೆಂದು ಹೇಳಿದರೆ ತಪ್ಪೇನು?

ಇಷ್ಟು ಬೇಗನೆ ಜೂನ್ 1939 ರಲ್ಲಿ ಯುದ್ಧದ ಪ್ರಾರಂಭವಾದೀತೆಂದು ಹಿಟ್ಲರನು ಎಣಿಸಿರಲಿಲ್ಲ. ರ್ಹೈನ್‌ಲ್ಯಾಂಡ್ ಆಕ್ರಮಣದಿಂದ ಪೋಲೆಂಡ್‌ವರೆಗೆ ಹಿಟ್ಲರನು ಮುವನ್ನು ಫಲಿಸುವವರೆಗೆ ಹಿಟ್ಲರನು ತನ್ನದ್ದಿತನದಲ್ಲಿ ಅನೇಕ ವಿಜಯಗಳನ್ನು ಸಂಪಾದಿಸಿದ್ದ. ರಕ್ತದ ಒಂದು ಹನಿ ಕೂಡ ಚೆಲ್ಲದೆ ಕಳೆದು ಹೋಗಿದ್ದ ಅನೇಕ ಪ್ರದೇಶಗಳನ್ನು ಮರಳಿ ಸಂಪಾದಿಸಿದ್ದ. ಹೀಗೆ ಗಂದ ಮಾತ್ರಕ್ಕೆ ಯುದ್ಧ ಸನ್ನಾಹವನ್ನು ಅನನು ಮಾಡಿದ್ದಿಲ್ಲವೆಂದಲ್ಲ. ಯಾವಿದ್ಧ ಸಿದ್ಧತೆಯಂತೂ ಪ್ರಚಂಡವಾಗಿ ಜರ್ಮನಿಯಲ್ಲಿ ನಡೆದಿತ್ತು. ಕಾರ್ಖಾನೆಗಳು ಹಗಲಿರುಳಿನ್ನದೆ ಯುದ್ಧಾಸ್ತ್ರಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಅನರ್ಘ್ಯಪ್ರಮಾಣದಲ್ಲಿ ಸಿದ್ಧಪಡಿಸುತ್ತಿದ್ದವು. ಪ್ರತ್ಯಕ್ಷ ಯುದ್ಧ ಕಾಲದಲ್ಲಿಯಂತೆ ಜರ್ಮನ್ ಜನತಾಂಗಕ್ಕೆ ಜೀವನೋಪಯೋಗಿ ಸಾಮಗ್ರಿಗಳು ಪರಿಮಾಣ ಪದ್ಧತಿಯಿಂದ ಪೂರೈಸಲ್ಪಡುತ್ತಿದ್ದವು. ರ್ಹೈನ್ ಪ್ರಾಂತವಂತೂ ಒಂದು ದೊಡ್ಡ ಕಾರ್ಖಾನೆಯ ಸ್ವರೂಪವನ್ನು ತಳೆದಿದ್ದರೆ, ಇಡೀ ಜರ್ಮನ ದೇಶಕ್ಕೆ ದಂಡಯಾತ್ರೆಗಾಗಿ ಯುದ್ಧ ಸನ್ನದ್ಧವಾದ ದುರ್ಜಯ ಸೈನ್ಯದ ಭಾವಣೆಯ ಸ್ವರೂಪ ಬಂದಿತ್ತು. ಜರ್ಮನಿಯು ಉಸಿರಿನಲ್ಲಿ ಸಹ ಯುದ್ಧದ ವಾಸನೆಯು ತುಂಬಿತ್ತು. ಈ ತರಹದ ಯುದ್ಧ ಸನ್ನಾಹದ ಹಿನ್ನೆಲೆಯನ್ನಿಟ್ಟುಕೊಂಡು ಯೂರೋಪರ ರಾಜಕಾರಣದಲ್ಲಿ ಹಿಟ್ಲರನು ಚದುರಂಗದಾಟವನ್ನಾಡುತ್ತ ಮುಂದೆ ಸಾಗಿದ್ದ.

ಹಿಟ್ಲರನು ಈ ವಿಶ್ವಮೇಧಕ್ಕಣಿಯಾಗಲು ಇನ್ನೊಂದು ಕಾರಣವಿತ್ತು. ನಾಝಿಪಕ್ಷವು ಅಧಿಕಾರಾರೂಢವಾಗುವಾಗ ಜರ್ಮನ ಜನತೆಯು ಬೆಂಬಲವನ್ನು ಪಡೆಯುವ ಉದ್ದೇಶದಿಂದ ಜರ್ಮನರಲ್ಲಿಯ ರಾಷ್ಟ್ರೀಯ ಭಾವನೆಯನ್ನು ಉದ್ದೀಪ್ತಗೊಳಿಸುವ ಪ್ರಚಾರವು ಅವ್ಯಾಹತವಾಗಿ ನಡೆಯಿತು. ಜರ್ಮನಿಯನ್ನು ಪ್ರಪಂಚದಲ್ಲಿಯೇ ಸರ್ವಶ್ರೇಷ್ಠ ರಾಷ್ಟ್ರವಾಗವಂತೆ ಮಾಡುವೆನೆಂಬ ನಾಝಿ ಪ್ರಚಾರದಿಂದ ಮನಸೋತ ಜರ್ಮನ ಜನತೆಯು ತನಗೆ ತಿಳಿಯದಂತೆ ಹೋರಾಟದ ಸಿದ್ಧತೆಗೆ ಅಣಿಯಾಗಿತ್ತು. ಹಿಟ್ಲರನಿಗೆ ಆಗಲೇ 50 ವರ್ಷ ವಯಸ್ಸಾಗಿತ್ತು. ತನ್ನ ಆಳ್ವಿಕೆಯಲ್ಲಿಯೇ ಜರ್ಮನಿಯು ಸಕಲೈಶ್ವರ್ಯ ಸಂಪನ್ನ ರಾಷ್ಟ್ರವನ್ನಾಗಿ ಮಾಡಬೇಕೆಂಬ ಹಿಟ್ಲರನಿಗೆ ಇನ್ನೂ ಹೆಚ್ಚು ಕಾಲಹರಣ ಮಾಡುವದು ಶಕ್ಯವಿರಲಿಲ್ಲ. ಮೇಲಾಗಿ ಆಕ್ರಮಣ ಪ್ರಚಾರದಿಂದ ಯುದ್ಧಕ್ಕೆಳಸುವ ಜನತೆಯಲ್ಲಿ ರಣೋತ್ಸಾಹವು ತುಂಬುತ್ತಿತ್ತು. ಆವನ್ನು ಕಡೆಗಣಿಸುವಂತಿದ್ದಿಲ್ಲ. ಯಾಕೆಂದರೆ ಒಮ್ಮೆ ಆ ಉತ್ಸಾಹಕ್ಕೆ ಯೋಗ್ಯ ಚಾಲನೆ ಜೊರೆಯದಿದ್ದರೆ ರಣೋತ್ಸಾಹವು ತನ್ನಷ್ಟಕ್ಕೇ ಇದ್ದಕ್ಕಿದ್ದಂತೆ ಮಾಯವಾಗಿ ಸೈನ್ಯದ ನೀತಿಮತ್ತೆಯು ಹಾಳಾಗುವ ದುಂಟು. ಹಾಗಾಗದಂತೆ ನೋಡಿಕೊಳ್ಳುವದಕ್ಕಾಗಿ, ಸುಸಜ್ಜಿತವಾದ ತನ್ನ ಸೈನ್ಯವು ರಣೋತ್ಸಾಹದ ಮತ್ತು ಪ್ರಚಂಡ ಶಕ್ತಿಯ ಯೋಗ್ಯ ಉಪಯೋಗಮಾಡಿಕೊಳ್ಳುವದಕ್ಕಾಗಿ ಹಿಟ್ಲರನು ಈ ವಿಶ್ವಮೇಧದಲ್ಲಿ ತಾನೂ ಧುಮಿಕಿ ಇಡೀ ಪ್ರಪಂಚವನ್ನೇ ಧುಮುಕಿಸಿದ.

ಒಮ್ಮೆಲೇ ಎಲ್ಲದಕ್ಕೂ ಕೈ ಹಾಕದೆ ಒಂದೊಂದಕ್ಕೆ ಕೈಹಾಕಿ ಅದನ್ನು ಸ್ವಾಧೀನಪಡಿಸಿಕೊಂಡು ಮತ್ತೆ ಬೇರೊಂದಕ್ಕೆ ಕೈ ಹಾಕುವದು ಹಿಟ್ಲರನ ಸ್ವಭಾವ. ಆದಕ್ಕನುಗುಣವಾಗಿ ಚೆಕೊಸ್ಲೋವಾಕಿಯಾವನ್ನು ನುಂಗಿ ಆದನ್ನು ಆರಗಿಸಿಕೊಂಡ ನಂತರ ಪೋಲಂಡಕ್ಕೆ ಕೈಹಚ್ಚಿದ. ಪೋಲಂಡವೆನ್ನೂ ಸಹಜವಾಗಿ ನುಂಗಬಹುದೆಂದೂ ಅವನು ಎಣಿಸಿದ್ದ. ಇಪ್ಪತ್ತು ದಿನಗಳವರೆಗೆ ತಾನು ನಡೆಸಿದ ಚಿಟ್ಜ್‌ಕ್ರೀಕ್ ಆತಂಕವನ್ನುಂಟುಮಾಡದ ಇಂಗ್ಲೆಂಡ್-ಫ್ರಾನ್ಸ್‌ಗಳು ಆವಾಗಲೂ ಸುಮ್ಮನಿರಬಹುದೆಂದು ಅವನು ಎಣಿಸಿದ್ದ. ಆದರೆ ಹಿಟ್ಲರನ ಆಕ್ರಮಣ ಶೀಲತೆಯು ಮೇರೆ ಮೀರಿ ಬೆಳೆದಾಗ ಇಂಗ್ಲೆಂಡ್-ಫ್ರಾನ್ಸ್‌ಗಳು ಜರ್ಮನಿಗೆ ವಿರುದ್ಧ ಯುದ್ಧ ಸಾರಿದವು. ಅನೇಕ ದೇಶಗಳನ್ನು ಛಿನ್ನ ವಿಚ್ಛಿನ್ನಗೊಳಿಸಿ, ಅನೇಕ ಜನತಾಂಗಗಳನ್ನು ಯಃಕಶ್ಚಿತನೆಯನ್ನಾಗಿ ಭೋಗಿಸಲಿಕ್ಕೆ ಹಚ್ಚಿ ಯುದ್ಧವು ಇಂದು ಈಗಿನ ಸ್ಥಿತಿಗೆ ಬಂದು ತಲಪಿದೆ.

ಇಂದಿನ ಯುದ್ಧದ ವೀರಾಗ್ರೇಸರನೆಂದು ಹಿಟ್ಲರನು ಮುಂದಿನ ಇತಿಹಾಸದಲ್ಲಿ ಹೆಸರನ್ನು ಪಡೆಯುವನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇತರ ರಾಷ್ಟ್ರಗಳೆಲ್ಲವೂ ಒಂದಾಗಿ ಅವನ ಮೇಲೆ ಉಂದುಬಿದ್ದರೂ ಅದ್ಯಾವುದನ್ನೂ ಲೆಕ್ಕಿಸದೆ ಕೊನೆಯವರೆಗೆ ಒಲಿತನದಿಂದ ಕಾದಿದ ಹಿಟ್ಲರನೆ ಸಾವು ಸಾಹಸವಲ್ಲ. ಏಕೆಂದರೆ ಅವನು ಇಂದು ಕಣ್ಮರೆಯಾಗಿದ್ದರೂ ಪ್ರತಿಯೊಬ್ಬ ಜರ್ಮನ್ ಪ್ರಜೆಯಲ್ಲಿ ಅಚ್ಚಳಿಯದೆ ಉಳಿದಿರುವನು. ಈ ಶೂನ್ಯಸ್ಥಾನದಲ್ಲಿ ಮುಂದೆ ಸ್ವತಂತ್ರ ರಜಪೂತ ಯುದ್ಧಗಳ ನೆನಪನ್ನು ತಂದಾಕೊಡುತ್ತದೆ. ಹಿಂದಿನ ಮಹಾಯುದ್ಧಾನಂತರ ಸಂಯುಕ್ತರಾಷ್ಟ್ರದವರು ಜರ್ಮನಿಯನ್ನು ನಡೆಸಿಕೊಂಡಂತೇ ಇಂದಿಗೂ ನಡೆಸಿಕೊಂಡಿದ್ದೇ ಆಗರೆ ಮುಂದೆ ಇಂತಹ ನೂರಾರು ಹಿಟ್ಲರರು ಜರ್ಮನಿಯು ತಂಬ ಜನ್ಮವೆತ್ತಿದಿರಬಹುದು. ಅಷ್ಟೊಂದು ಜನಜಾಗ್ರತಿಯನ್ನು ಹಿಟ್ಲರನು ಮಾಡಿ ಮುಗಿಸಿರುವನು.

ವ್ಯಕ್ತಿ ಪರಿಚಯ.

ಆಸ್ಟ್ರಿಯಾವು ಜರ್ಮನಿಗೆ ಹತ್ತಿಕೊಂಡಲ್ಲಿರುವ ಬ್ರಾನೌ ಎಂಬ ಹಳ್ಳಿಯಲ್ಲಿ ತಾ. 20-4-1886ನೇ ದಿನ ಹಿಟ್ಲರನ ಜನನವಾಯಿತು. ಇವನ ತಂದೆಯ ಹೆಸರು ಅಲೋಯಿಸ ಹಿಟ್ಲರ ಎಲೋಹಿಸನ ಮೂರನೇ ಹೆಂಡತಿಯಾದ ಕ್ಲಾರಾಪೋಯೆಲ್ ಜಲ್ಳು ಹಿಟ್ಲರನಿಗೆ ಜನ್ಮವಿತ್ತ ತಾಯಿ. ಬಡತನದಿಂದಾಗಿ ಹಿಟ್ಲರನಿಗೆ ಕ್ರಮವಾದ ವಿದ್ಯಾಭ್ಯಾಸವು ದೊರೆಯಲಿಲ್ಲ. ಲಿನ್ಜ್‌ನ ಶಾಲೆಯಲ್ಲಿ 4ನೇ ಈಯತ್ತೆಯನ್ನು ಮು

(4 ನೇ ಪುಠಕ್ಕೆ ಸಾಗಿದೆ.)

ಬಡವರ ಕಾಮಧೇನು ಕಾಂಗ್ರೆಸಿಗೆ ಓಟು ಕೊಡಿರಿ.

ಕೊ ಡ ಗು

ತಾ. ೧೧-೫-೧೯೪೫ನೇ ಶುಕ್ರವಾರ

ಯೂರೋಪಿನಲ್ಲಿ ಯುದ್ಧ ಮುಕ್ತಾಯ.

ಬರುವ ಸೆಪ್ಟೆಂಬರಿಗೆ ಯುದ್ಧವು ಪ್ರಾರಂಭವಾಗಿ ಆರು ವರ್ಷಗಳಾಗುವವು. ಈ ಘೋರತರವಾದ ಜಾಗತಿಕ ಯುದ್ಧವು ಈಗ ಯೂರೋಪಿನ ರಣರಂಗದಲ್ಲಿ ಮುಕ್ತಾಯಗೊಂಡಿದೆ. ಜರ್ಮನರು ಮಿತ್ರ ಮಂಡಳಿಯವರ ಅಪಾರ ಶಕ್ತಿಗೆ ಶರಣಾಗತರಾಗಿರುವರು. ಪ್ರಾಮುಖ್ಯ ಕ್ಷೇತ್ರದಲ್ಲಿ ಯುದ್ಧವು ಅಂತ್ಯವಾದರೂ ಪೂರ್ವದಲ್ಲಿ ಜಪಾನರ ಹಠವನವು ನಡೆಯುತ್ತಲೇ ಇದೆ. ಆದರೆ ಬಲಾಢ್ಯ ಜನಾಂಗಗಳ ಸಮಗ್ರ ಶಕ್ತಿಯ ಮುಂದೆ ಜಪಾನೊಂದಕ್ಕೇ ಧೀರ್ಘಕಾಲ ಪ್ರತಿಭಟಿಸಲು ಸಾಧ್ಯವಾಗಲಾರದೆಂದು ತೋರುತ್ತದೆ.

1939 ರಲ್ಲಿ ಪೋಲೆಂಡಿನ ಮೇಲೆ ಧಾಳಿ ನಡಿಸಿದ ಹಿಟ್ಲರನು ದಿನೇ ದಿನೇ ಯೂರೋಪಿನಲ್ಲಿ ಜಯಹೊಂದುತ್ತಾ ಬಂದು 1940 ರಲ್ಲಿ ಬ್ರಿಟನನ್ನು ಜಯಿಸಲು ಅವನಿಗೆ ಇಂಗ್ಲಿಷ್ ಕಾಲುವೆ ಒಂದು ಮಾತ್ರ ಅಡ್ಡ ನಿಂತಿತ್ತು. ಅಲ್ಲಿಂದ ಅವನು ಪೂರ್ವಕ್ಕೆ ತಿರುಗಿ 1942 ರಲ್ಲಿ ಜಯದ ಉಚ್ಛ ಸ್ಥಾನಕ್ಕೆ ಏರಿದ್ದನು. ಆದ ಕಾರಣ ರಷ್ಯಾದ ಮೇಲೆ ಧಾಳಿ ನಡಿಸಿದನು. ಸ್ಟಾಲಿನ್‌ಗ್ರಾಡಿನ ವರೆಗೂ ಜಯಭೇರಿಯನ್ನು ಭಾರಿಸಿದನು. ಆದರೆ ಅಲ್ಲಿ ರಷ್ಯನ ಕೆಂಪು ಸೈನ್ಯದವರು ಅಸಾಧ್ಯ ಪರಾಕ್ರಮದಿಂದ ಅವರನ್ನು ತಡೆದು ಹಿಂದಕ್ಕೋಡಿಸಿದರು. ಅಂದಿನಿಂದ ಜಯಶ್ರೀಯು ಹಿಟ್ಲರನ ಕೈಬಿಟ್ಟಿತು. ಕ್ರಮಶಃ ಹಿಂದಕ್ಕೋಡಿಸಲ್ಪಟ್ಟು ಇಂದು ತನ್ನ ಅತ್ಯುತ್ತಮವಾದ ಕೋಟೆಗಳ ಪಟ್ಟಣವಾದ ಬರ್ಲಿನನ್ನೂ ಕೂಡ ಬಿಟ್ಟುಕೊಡಬೇಕಾಯಿತು. ಇಟೆಲಿಯಲ್ಲಿಯೂ, ನಾರ್ವೆಯಲ್ಲಿಯೂ ಮತ್ತು ಜೆಕೊಸ್ಲೋವಿಕಿಯಾದಲ್ಲೂ ಜರ್ಮನರು ಶರಣಾಗತರಾದರು. ಇದರಿಂದ ಮಿತ್ರಮಂಡಳಿಯವರು ಯೂರೋಪಿನ ಯುದ್ಧವನ್ನು ಜಯಿಸಿದರೆಂದು ಹೇಳಲು ಸಾಧ್ಯವಿಲ್ಲ. ಬಹುದಲ್ಲದೆ ಪ್ರಪಂಚದಲ್ಲಿ ಶಾಂತಿಯನ್ನು ಜಯಿಸಿದರೆಂದು ಹೇಳಲು ಸಾಧ್ಯವಿಲ್ಲ.

ಯೂರೋಪಿನಲ್ಲಿ ಯುದ್ಧವು ಮುಗಿದದ್ದರಿಂದ ಜರ್ಮನಿ ಮತ್ತು ಇಟೆಲಿಯಲ್ಲಿ ಫೇಸಿಸ್ಮ್ ಅಂತ್ಯಗೊಂಡತಾಯಿತು. ಸ್ಪೈನಿನಲ್ಲಿ ಫೇಸಿಸ್ಮ್‌ಗೆ ಬೆಂಬಲವಿಲ್ಲದ್ದರಿಂದ ಅಲ್ಲಿಯೂ ಅದು ಮುರಿದಂತೆಯೇ. ಜಪಾನಿನಲ್ಲಿಯೂ ಮುರಿಯುತ್ತಾ ಇದೆ. ಫೇಸಿಸ್ಮ್ ಅಂದರೆ ಬಲತ್ಕಾರದ ವೀರಲೆಟರಿ ಆಡಳಿತವೆಂದೇ ಹೇಳಬಹುದು. ಜನರ ಒಪ್ಪಿಗೆ ಇಲ್ಲದೆ ಅವರ ಮೇಲೆ ರಾಜ್ಯಭಾರ ಮಾಡುವುದರಲ್ಲಿಯೂ ಫೆಸಿಸ್ಮ್ ಇದೆ ಇಂಪೀರಿಯಲಿಸ್ಮ್‌ಗೂ, ಫೇಸಿಸ್ಮ್‌ಗೂ ದೊಡ್ಡ ವ್ಯತ್ಯಾಸವಿಲ್ಲ. ಇಡೀ ಪ್ರಪಂಚದಲ್ಲಿಯೇ ಫೇಸಿಸ್ಮ್‌ಗೆ ಅವಕಾಶವಿಲ್ಲದಂತೆ ಮಾಡುವುದು ಸಂಯುಕ್ತ ಜನಾಂಗಗಳ ಉದ್ದಿಶ್ಯವಾದರೆ ಅವರು ತಮ್ಮ ಸಾಮ್ರಾಜ್ಯಶಾಹಿತ್ವವನ್ನು ಕೂಡಲೇ ಬಿಟ್ಟಬಿಡಬೇಕು. ತಮ್ಮ ಕೈಳಗೆ ಇರುವ ಜನಾಂಗಗಳಿಗೆಲ್ಲಾ ಸ್ವಾತಂತ್ರ್ಯವನ್ನು ಕೊಡಬೇಕು. ಅಮೇರಿಕದ ಪ್ರೆಸಿಡೆಂಟರಾದ ಟ್ರುಮನರು ಫಿಲಿಫೈನ್ಸ್ ದ್ವೀಪಗಳಿಗೆ ಬೇಗನೆ ಸ್ವಾತಂತ್ರ್ಯಕೊಡುವೆವೆಂದು ಸೂಚಿಸಿದ್ದು ಯೋಗ್ಯ ಉದಾಹರಣೆ. ಜಪಾನರೊಂದಿಗೆ ಯುದ್ಧವು ಮುಗಿಯುವ ಕಾಲಕ್ಕೆ ಈ ಸ್ವಾತಂತ್ರ್ಯವು ಕೊಡಲ್ಪಡುವಂತಾಗಬೇಕು. ಇವರ ನೇಲ್ಪಂಕ್ತಿಯನ್ನೇ ಉಳಿದ ಸಂಯುಕ್ತ ರಾಷ್ಟ್ರಗಳೂ ಹಿಂಬಾಲಿಸಬೇಕು.

ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯ ಏರ್ಪಾಡಿಗಾಗಿ ಸಾನ್ ಫ್ರಾನ್ಸಿಸ್ಕೊದಲ್ಲಿ ಕೂಡಿರುವ ಸಂಯುಕ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಯೂ ಚರ್ಚೆಗೆ ಬರಬೇಕು. ಈ ಸಂಬಂಧ ಮಿಸಸ್ ಪಂಡಿತರು ತಯಾರಿಸಿರುವ ಅಪ್ಪೀಲು ಸಭೆಯಲ್ಲಿ ಚರ್ಚೆಗೆ ಇಡಲ್ಪಡುವುದೋ ಎಂಬುದು ಇನ್ನೂ ಗೊತ್ತಾಗಿರುವುದಿಲ್ಲ. ರಷ್ಯಾದ ಪ್ರಧಾನ ಪ್ರತಿನಿಧಿಯಾದ ಶ್ರೀಮೊಲೊಟೊವ್‌ರವರು ಹಿಂದೂದೇಶದ ಹಾಗೂ ಇತರ ಎಲ್ಲಾ ಆಶ್ರಿತ ಜನಾಂಗಗಳ ಸ್ವಾತಂತ್ರ್ಯದ ವಿಚಾರ ಒತ್ತಿ ಹೇಳುತ್ತಿದ್ದಾರೆ. ಹೀಗೆ ಪ್ರಪಂಚದ ಎಲ್ಲಾ ಜನಾಂಗಗಳಿಗೆ ಅವರವರ ದೇಶದ ಆಡಳಿತ ನಡಿಸುವ ಸ್ವಾತಂತ್ರ್ಯ ದೊರೆಯುದೆ ಹೋದರೆ ಈ ಆರು ವರ್ಷಗಳ ಯುದ್ಧದ ಗುರಿಯು ಸಾಧಿಸಿದಂತಾಗುವುದಿಲ್ಲ; ಆಂದರೆ ಪ್ರಪಂಚದಲ್ಲಿ ಶಾಂತಿಸ್ಥಾಪನೆ ಮಾಡಿದಂತಾಗುವುದಿಲ್ಲ. ಯುದ್ಧದ ಅನಾಹುತಗಳಿಗೆ ಹಲವು ರೀತಿಯಲ್ಲಿ ತುತ್ತಾದ ಜನಸಮುದಾಯಕ್ಕೆ ಈ ಘೋರ ಯುದ್ಧವು ಯಾವಾಗ ಮುಗಿಯುವದೆಂದು ಕಾಯುತ್ತಿದೆ. ಆದರೆ ಬರೇ ಯುದ್ಧಾಂತ್ಯದಿಂದ ಅವರಲ್ಲಿ ಸಮಧಾನ ಉಂಟಾಗಲಾರದು. ಯುದ್ಧದ ಉದ್ದೇಶವಾದ ಶಾಂತಿ ಸ್ಥಾಪನೆಯೇ ಆಗಬೇಕು. ಹೀಗಾಗಲು ಪರಾಜಿತವಾದ ಜನಾಂಗಗಳ ಛೇಲೆದಯೆ ಮತ್ತು ಕ್ಷಮೆಯನ್ನು ತೋರಿಸಬೇಕು. ಜಯದ ಉತ್ಸವವನ್ನು ನಡಿಸುವುದರ ಬದಲು ಪ್ರಪಂಚದ ಎಲ್ಲಾ ಭಾಗಗಳಲ್ಲಿ ಸ್ವಾತಂತ್ರ್ಯದ ಉತ್ಸವವನ್ನು ನಡಿಸುವಂತಾಗಬೇಕು.

ವರ್ತಮಾನ.

ಕುಕ್ಕೂರು ಗ್ರಾಮದ ಭದ್ರಕಾಳಿ ದೇವರ ಹಬ್ಬವು ಈ ತಾ. 21, 22 ಮತ್ತು 23 ರಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಯೂರೋಪಿನಲ್ಲಿ ಯುದ್ಧವು ಅಂತ್ಯವಾದುದರಿಂದ ಕೋರ್ಟು ಕಚೇರಿಗಳಿಗೂ, ಶಾಲೆಗಳಿಗೂ ಈ ತಾ. 9 ಮತ್ತು 10 ರಲ್ಲಿ ರಜೆ ಕೊಡಲಾಗಿತ್ತು. ತಾ. 14 ರಲ್ಲಿ ವಿಜಯ ಉತ್ಸವವು ನಡೆಸಲಾಗುವ ಕಾರಣ ಆ ದಿನವೂ ಪಬ್ಲಿಕ್ ರಜೆ ಇರುವುದು.

ಈ ತಾ. 14 ರಲ್ಲಿ ವಿಜಯ ಉತ್ಸವವನ್ನು ನಡಿಸುವ ಕಾರಣ, ಆ ದಿನ ನಡೆಯಲಿಕ್ಕಿದ್ದ ಕೌನ್ಸಿಲು ಚುನಾವಣೆಯನ್ನು ತಾ. 28 ನೇ ಸೋಮವಾರಕ್ಕೆ ಮುಂದರಿಸಿಡಲಾಗಿದೆ. ತಾ. 28 ರಲ್ಲಿಯೂ ಪಬ್ಲಿಕ್ ರಜೆ ಇದೆ.

ಡಾಕ್ಟರ್ ತೀತಿರ ಬಿ. ಮೇದಪ್ಪನವರು ಈ ತಾ. 7 ರಲ್ಲಿ ಸಿವಿಲ್ ಸರ್ಜನ್ ಹುದ್ದೆಯ ಚಾರ್ಜನ್ನು ವಹಿಸಿಕೊಂಡರು.

ಡಾಕ್ಟರ್ ಹೆಚ್. ಯಂ. ಮಂಜಪ್ಪನವರು ವೀರಾಜಪೇಟೆಗೂ, ಡಾ. ಪಿ. ಯಂ. ಗಣಪತ್ತಿಯವರು ಸೋಮವಾರಪೇಟೆಗೂ, ಡಾ. ಪಿ. ಸಿ. ಕಾರ್ಯಪ್ಪನವರು ಸುಂಟಿಕೊಪ್ಪಲಿಗೂ, ಡಾ. ವೆಂಕಟ ಸುಬ್ಬಯ್ಯನವರು ಶನಿವಾರಸಂತೆಗೂ, ಡಾ. ಮಾಧವರಾಯರು ವೀರಾಜಪೇಟೆಗೂ ಮತ್ತು ಡಾ. ರಘುನಾಥರಾಯರು ಮಡಿಕೇರಿಗೂ ವರ್ಗಾಯಿಸಲ್ಪಟ್ಟಿರುವರು.

ಹರಿದಾಸ ಎ. ಅಪ್ಪಚ್ಚ ಕವಿಯವರ ಸ್ಮಾರಕನಿಧಿಯ ಸಹಾಯಕ್ಕಾಗಿ ನಾಪೋಕ್ಲು ಮತ್ತು ಕಡಿಯತ್ತು ನಾಡು ಸಹಕಾರಿ ಯೂನಿಯನ್ನಿನ ನಾಟಕಮಂಡಳಿಯವರು 'ಯಯಾತಿರಾಜ'ನ ನಾಟಕವನ್ನು ಈ ತಾ. 10 ರ ರಾತ್ರಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಅಭಿನಯಿಸಿದರು.

ಫ್ರೇಜರ್‌ಪೇಟೆ ಲಿಸ್ಟ್ರೈಯ 'ನಂ ಜುಂಡಶೆಟ್ಟಿ ವಾರ್ತೆ' ಈ ತಾ. 8 ರಲ್ಲಿ ಅ. ಕ. ರಾ. ಬ. ಕೆ. ಟಿ. ಉತ್ತಪ್ಪನವರಿಂದ ವೈಜೃಂಭಣೆಯಿಂದ ತೆರೆಯಲ್ಪಟ್ಟಿತು. ಆ ದಿನ ಸಾಯಂಕಾಲ ನೂರಾರು ಜನರು ತಿಂಡಿ ತೀರ್ಥಗಳಿಂದ ಪತ್ಕರಿಸಲ್ಪಟ್ಟರೆಂದೂ ತಿಳಿಯಬರುತ್ತದೆ.

'ಕೊಡಗು' ಕಂಪೆನಿಯ ವಾರ್ಷಿಕ ಮಹಾ ಸಭೆಯು ಈ ತಾ. 8 ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

—೦೦—

ಕಾಂಗ್ರೆಸ್ಸಿಗೇ ಯಾಕೆ ಓಟು ಕೊಡಬೇಕು ?

1. ಅದು ಭಾರತೀಯರೆಲ್ಲರ ಏಕ ಮಾತ್ರ ಸಂಸ್ಥೆ.
2. ಅದು ನಮ್ಮ ಗುಲಾಮಗಿರಿಯನ್ನು ಹೋಗಲಾಡಿಸಲು ಸೊಂಟಗಟ್ಟಿದ ಸಂಸ್ಥೆ.
3. ಅದು ನಮ್ಮ ಗ್ರಾಮೋದ್ಧಾರವನ್ನು ಸಾಧಿಸುವ ಸಂಸ್ಥೆ.
4. ಅದು ಬಡವರ ಹಿತಕ್ಕಾಗಿ ಸವೆಯುತ್ತಿರುವ ಸಂಸ್ಥೆ.
5. ಅದು ಮಹಾತ್ಮಗಾಂಧೀಜಿಯವರ ಪವಿತ್ರ ನೇತೃತ್ವದಲ್ಲಿ ನಡಿಸಲ್ಪಡುತ್ತಿರುವ ಸಂಸ್ಥೆ.

ಪೊನ್ನಂಪೇಟೆ-ಶ್ರೀಮಂಗಲ ಜಮ್ಮ ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಈ ತಾ. 28ರಲ್ಲಿ ನಡೆಯಲಿರುವ ಕೌನ್ಸಿಲು ಚುನಾವಣೆಗೆ ನಾವು ಮೂವರು ಕಾಂಗ್ರೆಸು ಪರ ಉಮೇದುವಾರರಾಗಿ ನಿಲ್ಲಿಸಲ್ಪಟ್ಟಿದ್ದೇವೆ. ಇಂದು ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ಏಳಿಗೆಗಾಗಿ ಹೋರಾಡುತ್ತಿರುವ ಸಂಸ್ಥೆಯೂದರೂ ಕಾಂಗ್ರೆಸ್ಸಿಂದೇ ಆಗಿದೆ. ಆದುದರಿಂದ ನಿಮ್ಮ ಅಮೂಲ್ಯವಾದ ಮೂರು ಓಟುಗಳನ್ನು ನಾವು ಮೂವರಿಗೇ ಕೊಟ್ಟು ನಮ್ಮ ಸಂಸ್ಥೆಯಾದ ಕಾಂಗ್ರೆಸ್ಸಿನ ಜಯವನ್ನು ಸಂಪಾದಿಸಲು ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಇತಿ ನಿಮ್ಮವರಾದ,

9-5-45. ಪಿ. ಎಂ. ಪೂಣಚ್ಚ,
ಕೆ ಕೆ. ಗಣಪತ್ತಿ,
3-1. ಪಿ. ನಾಣಮ್ಮಯ್ಯ.

—೦೦—

ಮಡಿಕೇರಿ-ಮೂರ್ನಾಡು ಜಿಲ್ಲಾ ಬೋರ್ಡಿನ ಓಟರುಗಳಲ್ಲಿ ವಿನಂತಿ.

ಮೂರ್ನಾಡಿನ ನಿವಾಸಿಗಳಲ್ಲಿ ಒಬ್ಬರು ಜಿಲ್ಲಾ ಬೋರ್ಡಿಗೆ ಉಮೇದ್ವಾರರಾಗಿ ನಿಲ್ಲಬೇಕೆಂದು ಮೂರ್ನಾಡು ಮಹನೀಯರ ಅಭಿಪ್ರಾಯವಿದ್ದದ್ದರಿಂದಲೂ ಮತ್ತು ಆ ಸಮಯದಲ್ಲಿ ಕಾಂಗ್ರೆಸ್ಸಿನ ತಿವಿಯಿಂದ ಯಾರು ಉಮೇದ್ವಾರರು ನಾಮಿನೇಶನ್ ಪತ್ರ ಹಾಕದ್ದರಿಂದಲೂ, ನಾನು ನನ್ನ ನಾಮಿನೇಶನನ್ನು ಹಾಕಿದೆನು.

ಆದರೆ ಇತ್ತೀಚೆಗೆ ನಮ್ಮ ನಾಡಿನವರಾದ ಶ್ರೀ ಚಾರಿರ ಮಂದಣ್ಣನವರು ಕಾಂಗ್ರೆಸ್ ಉಮೇದ್ವಾರನಾಗಿ ಜನನಾಯಿಸಲ್ಪಟ್ಟಿರುವದರಿಂದ ಕಾಂಗ್ರೆಸ್ಸಿನ ಹಿತ ಚಿಂತಕನಾಗಿ, ಕಾಂಗ್ರೆಸ್ಸಿಗೆ ವಿರೋಧ ಭಾವನೆಗೆ ನಿಲ್ಲುವುದು ಸಮಂಜಸವಲ್ಲವೆಂಬದಾಗಿ ನಾನು ನನ್ನ ಮೇಲ್ಕಂಡ ಉಮೇದ್ವಾರಿಕೆಯನ್ನು ವಾಪಾಸು ತೆಗೆದು ಕೊಂಡಿರುತ್ತೇನೆ. ಆದುದರಿಂದ ಮತದಾರರು ನನಗೆ ಓಟು ಕೊಡಬಾರದಾಗಿ ಕೋರಿಕೆ.

ಕೆ. ಯಂ. ಮೊಣ್ಣಪ್ಪ.
ಮೂರ್ನಾಡು.

—೦೦—

ವಿಜ್ಞಾಪನೆ.

ಕೊಡಗು ಶನಿವಾರಸಂತೆ ಹೋಬಳಿ ಓಟರುಗಳಲ್ಲಿ ವಿನಂತಿ.

ಮಹಾನೀಯರೀ,

ಇದೇ ಮೇ ತಾರೀಕು 21 ರಲ್ಲಿ ಇರುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಈ ಹೋಬಳಿ ಪಕ್ಷವಾಗಿ ಎಸ್. ಎಂ. ಚನ್ನಬಸಪ್ಪನಾದ ನಾನು ನಿಂತಿರುವುದರಿಂದ ತಾವುಗಳು ತಮ್ಮ ಘನವಾದ ಒಂದು ಓಟನ್ನು ನನ್ನ ಪರವಾಗಿ ಕೊಟ್ಟು ತಮ್ಮಗಳ ಸೇವೆಯನ್ನು ಮಾಡಲಿಕ್ಕೆ ಅವಕಾಶವನ್ನು ವದಗಿಸಿಕೊಡಬೇಕಾಗಿ ಬೇಡುವ. ಆದುದರಿಂದ ದಯವಿಟ್ಟು ಕೆಳಗೆ ಕಾಣಿಸಿರುವ ರೀತಿ ಒಂಟಿಯ ನಕ್ಷೆಯ ಎದುರುಗಡೆ ಈ X ಗುರ್ತು ಹಾಕಬೇಕಾಗಿ ಕೇಳಿಕೊಳ್ಳುತ್ತೇನೆ.

ಎಸ್. ಎಂ. ಚೆನ್ನ ಬಸಪ್ಪ.		X

ಶನಿವಾರಸಂತೆ, ತಮಗಳ ಸೇವಕ.
ಎಸ್. ಎಂ. ಚನ್ನಬಸಪ್ಪ.
23-4-45. 4-2

—•— ಶೇಲಡಾ —•—

ಎಂಟಿ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರ ಗಡ್ಡೆ, ತಜ್ಜನ್ಯ ಅಶಕ್ತತೆ ಮೇಲೆ ರಾಮಬಾಣ; ಲಿವರ, ಹೊಟ್ಟೆನೋವು, ಮಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ ಕ್ವಿನೈನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ಉಪಯೋಗಿಸುವರು, 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0. ಈ ಔಷಧಿ ಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮೂಡಿ ಕೊಟ್ಟವರಿಗೆ ಒಂದು ಸಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ಮಾರಾಟಕ್ಕೆ ಏಜೆಂಜರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ.

ಸೋಲ್ ಏಜೆಂಟರು—

ಎಸ್. ಎಲ್. (ಅಪ್ಪುರಾವ್) ಧಾಕಪ್ಪ,
ಬಡವರ ಔಷಧಿ ಸರ್ವಿಸ್,
ಶಿರ್ಸಿ, ಉತ್ತರ ಕನ್ನಡ.

—೦೦—

ಶ್ರೀಚಾರಣಾ ಕಾಫಿವರ್ಕ್ಸ್

ಕಾಫಿ ಬೇಳೆಯನ್ನು ಕೊಂಡುಕೊಳ್ಳುವುದಕ್ಕಿಂಥಾ ಹುಡಿಯನ್ನು ಪಡೆದುಕೊಂಡರೆ ಪೌಂಡಿಗೆ ಒಂದಾಣೆ ಲಾಭ ದೊರೆಯುವುದು.

(16 ಕಾಫಿ ಹುಡಿ ರಾತಲು 1ಕ್ಕೆ ರೂ 1—7—0.

ಶ್ರೀಚಾರಣಾ ಕಾಫಿ ವರ್ಕ್ಸ್
ಮಾರ್ಕೆಟ್ ಬಿಲ್ಡಿಂಗ್ಸ್
ಮೈಸೂರು

ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

ಇವರ ಸಿದ್ಧೌಷಧಗಳು.

1. **ನಿಕಾಫ್ ಟೂತ್ ಪೌಡರ್.** ಬೆಲೆ ಪೊಟ್ಟಣ ಒಂದಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. **ಪಾಮರಿ ಚೂರ್ಣ** .... ಬೆಲೆ ಪೊಟ್ಟಣ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. **ಬಾಲವರ್ಧಿನಿ ಮಿಶ್ರಣ** .... ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. **ದ್ರಾಕ್ಷಾರಿಷ್ಟ** .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ)

ಉಚಿತ ಕ್ಯಾಟಲಾಗಿಗೆ ಬರೆಯಿರಿ—

ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

12)

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಟೋ—ಫಾಸ್ಫೋ—ಮೊಲ್ಫ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಸಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟರ್ ಫಾಸ್ಫೋಮೊಲ್ಫ್, ಹೆಮೋಗ್ಲೋಬಿನ್, ಸೋಡಿಯಂ ಗ್ಲಿಸರೊ ಫಾಸ್ಫೇಟ್ ಹೆಪ್ಟೋನ್, ಸಾಲ್, ಮೊಲ್ಫ್ ಎಕ್ಸ್‌ಟ್ರಾಕ್ಟ್, ಡಾಕ್ಟಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಾಪುಗಳಲ್ಲಿಜ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.

22)

ಇಟಲಿ ಯುದ್ಧ ಅಂತ್ಯ.

1943 ನೇ ಸೆಪ್ಟೆಂಬರಿನಲ್ಲಿ ಮಿತ್ರ ಸೈನ್ಯಗಳು ಫೀಲ್ಡ್ ಮಾರ್ಷಲ್ ಮಾಂಟಿಗೋಮರಿಯವರ ನಾಯಕತ್ವದಲ್ಲಿ ಇಟಲಿ ಮೇಲೆ ದಂಡಯಾತ್ರೆಯನ್ನಾರಂಭಿಸಿದವು. ಈಗ ಒಂದೂವರೆ ವರ್ಷಗಳಲ್ಲಿ ಇಟಲಿಯು ಕದನವೆಲ್ಲ ಮುಕ್ತಾಯಗೊಂಡಿದೆ. ಇಟಲಿಯಲ್ಲಿದ್ದ ಜರ್ಮನ್ ಸೈನಿಕರೆಲ್ಲರೂ ಯಾವ ಷರತ್ತೂ ಇಲ್ಲದೆ ಶರಣಾಗತರಾದರು. ಜರ್ಮನರು ಈ ರೀತಿ ಯಾವ ಷರತ್ತು ಇಲ್ಲದೆ ಅಧಿಕ ಸಂಖ್ಯೆಯಲ್ಲಿ ಶರಣಾಗತರಾದುದು ಇದೇ ಮೊದಲು. ಈ ಸಂದರ್ಭದಲ್ಲಿ 10 ಲಕ್ಷ ಜರ್ಮನ್ ಸೈನಿಕರು ಶಸ್ತ್ರಾಸ್ತ್ರಗಳನ್ನು ಕೆಳಕ್ಕೆ ಇಟ್ಟಿದ್ದಾರೆ.

ಇಟಲಿಯಲ್ಲಿಯ ಜರ್ಮನರು ಈ ರೀತಿ ಶರಣಾಗತರಾದರೆಂಬ ಸುದ್ದಿಯು ಫೀಲ್ಡ್ ಮಾರ್ಷಲ್ ಅಲೆಗ್ಜಾಂಡರ್‌ರವರ ಹೆಡ್‌ಕ್ವಾರ್ಟರ್ಸಿನಿಂದ ಹೊರಟ ಪ್ರಕಟಣೆಯಿಂದ ಗೊತ್ತಾಯಿತು. ಜರ್ಮನ್ ಭೂ, ನೌಕಾ ಮತ್ತು ವೈಮಾನಿಕ ಪಡೆಗಳೆಲ್ಲವೂ ಒಪ್ಪಂದಮಾಡಿಕೊಂಡು ಫೀಲ್ಡ್ ಮಾರ್ಷಲ್ ಅಲೆಗ್ಜಾಂಡರ್‌ರವರಿಗೆ ಶರಣಾಗತರಾಗಲು ನಿಶ್ಚಯಿಸಿಕೊಂಡವು. ಮೇ 2 ನೇ ತಾರೀಕು ಮಧ್ಯರಾತ್ರಿ ಜರ್ಮನ್ ಸೈನ್ಯಗಳೆಲ್ಲ ಶರಣಾಗತವಾದವು.

—೦೦—

ಯೂರೋಪಿನಲ್ಲಿ ಜರ್ಮನರು ಶರಣಾಗತರಾದರು.

ಈ ತಾ. 7 ರಲ್ಲಿ ಜರ್ಮನರು ಶರತ್ತಿಲ್ಲದೆ ಶರಣಾಗತರಾದರು. ಹಿಟ್ಲರನ ಮರಣದ ನಂತರ ಜರ್ಮನಿಯ ಸರ್ವಾಧಿಕಾರಿಯಾಗಿದ್ದ ಎಡ್ಮಿರಲ್ ಡೊನಿಟ್ಸ್‌ರು ತನ್ನ ಸೈನಿಕರಿಗೆ 'ಶಸ್ತ್ರಗಳನ್ನು ಕೆಳಗಿಡಿರಿ' ಎಂಬ ಹುಕುಮನ್ನು ಕೊಡುತ್ತಾ ಹೀಗೆಂದರು—'ಅಸಾಧಾರಣವಾದ ಕಷ್ಟತರದ ಆರು ವರ್ಷಗಳ ವೀರ ಕದನದ ನಂತರ ಜರ್ಮನಿಯ ಶತ್ರುಗಳ ಮಿತಿಮೀರಿದ ಬಲಕ್ಕೆ ಬಗ್ಗಬೇಕಾಯಿತು. ಯುದ್ಧವನ್ನು ಮುಂದುವರಿಸುವದೆಂದರೆ ಅನರ್ಥಕ್ಕಾಸ್ಪದವಾದ ರಕ್ತಪಾತ ಮತ್ತು ನಿಷ್ಪ್ರಯೋಜನಕಾರಿಯಾದ ನಾಶ. ಜನಾಂಗದ ಭವಿಷ್ಯಕ್ಕೆ ಜವಾಬ್ದಾರಿಯಾಗಿರುವ ಸರ್ಕಾರವು ಶಕ್ತಿಯು ಮುರಿದುಹೋದ ಕಾರಣ ಯುದ್ಧ ನಿಲ್ಲಿಸಬೇಕೆಂಬ ಶತ್ರುಗಳ ಕೇಳಿಕೆಗೆ ಒಪ್ಪಬೇಕಾಯಿತು'

ಜರ್ಮನಿಯ ನೌಕಾಪಡೆಯವರು ಶರಣಾಗತರಾಗಿರುವರು: ಅವರು ಸಮೀಪದ ಮಿತ್ರಮಂಡಲಿಯ ಬಂದರುಗಳಲ್ಲಿ ಬಂದು ನಿಲ್ಲಬೇಕೆಂದು ಹುಕುಂ ಆಗಿದೆ. ಅವರನ್ನು ಜಪಾನಿನ ಮೇಲೆ ಧಾಳಿನಡಿಸಲು ಉಪಯೋಗಿಸಬಹುದೆಂಬ ಊಹನೆ ಇದೆ.

—೦೦—

ಐಯರಿನಲ್ಲಿ ಹಿಟ್ಲರನಿರುವನೇ ?

ಕಳೆದವಾರದ ಅಂತ್ಯದಲ್ಲಿ ಮೂವರು ಒಂದು ಜರ್ಮನಿಯ ವಿಮಾನದಲ್ಲಿ ಡೆನ್ಮಾರ್ಕ್‌ದಿಂದ ಐಯರಿನಲ್ಲಿ ಬಂದಿಳಿದರು. ಅವರು ಯಾರೆಂದು ಇನ್ನೂ ಪ್ರಕಟವಾಗಿಲ್ಲ. ಅವರಲ್ಲೊಬ್ಬನು ಹಿಟ್ಲರನಾಗಿರಬಹುದೆಂಬ ಸುದ್ದಿ ಎದ್ದಿದೆ.

ಒಂದು ವಾರದ ಹಿಂದೆ ಹಿಟ್ಲರನು ಮತ್ತು ಗೋರಿಂಗನು ಆಸ್ಟ್ರಿಯಾದ ಹಿಂಟರ್ ಸರೋವರದಕಡೆ ಹೋದರೆಂದೂ ಮತ್ತೊಂದು ಸುದ್ದಿ.

ಸರ್ ಫಿರೋಜರಿಗೆ ಮಹಾತ್ಮರ ಆಹ್ವಾನ.

'ಗಾಂಧಿಜಿ ರಾಜಕೀಯದಿಂದ ನಿವೃತ್ತರಾಗಿ ಪಂಡಿತ ನೆಹರೂರವರಿಗೆ ಸ್ಥಾನ ಬಿಟ್ಟುಕೊಡಬೇಕು; ನೆಹರೂರ ಬಿಡುಗಡೆಯಾಗುವ ಸಂಭವವಿದೆ' ಎಂದು ಸರ್ ಫಿರೋಜಖಾನ ನೂನರು ಫಿಸ್ಕೋದಲ್ಲಿ ಹೇಳಿದ್ದಕ್ಕೆ ಗಾಂಧೀಜಿಯವರು ಆಹ್ವಾನ ಕೊಟ್ಟು, ಸರ್ ಫಿರೋಜರು ತಮ್ಮ ರಾಜೀನಾಮೆಯ ಹೆದರಿಕೆ ಹಾಕಿ ಪಂಡಿತರನ್ನು ಮುಕ್ತ ಮಾಡಿದರೆ ತಾವು ನಿವೃತ್ತರಾಗಿ ಸರ್ ಫಿರೋಜರು ಹೇಳಿದಂತೆ ಅವರಿಗೆ (ಪಂಡಿತರಿಗೆ) ಸ್ಥಾನ ಬಿಟ್ಟುಕೊಡುವುದಾಗಿ ತಿಳಿಸಿದ್ದಾರೆ. ಇದಕ್ಕೆ ಉತ್ತರವಾಗಿ ಮಹಾತ್ಮರು ಶರತ್ತುಹಾಕಿ ನಿವೃತ್ತರಾಗುವುದು ಯೋಗ್ಯವಲ್ಲವೆಂದು ಹೂನರು ಹೇಳಿರುವರು.

೧೨೦೦ ರೂ. ಗಳಿಗೆ ಒಂದು ಅಕ್ಕಿಯ ಚೀಲ!

೧ ಸಿಗರೇಟ ಪ್ಯಾಕಿಗೆ ೪೦ ರೂ. ಗಳು

ಇರಾವತಿ ನದಿ ದಂಡೆಯ ಮೇಲಿರುವ ಯೆನಾಂಗಯೂಂಗ ನಗರದಲ್ಲಿ ಅತಿ ಪ್ರಸರಣೆಯು ವಿಶೇಷವಾಗಿದೆ.

ಒಂದು ಪ್ಯಾಕೆಟ್ಟು ಜಪಾನೀ ಕೀಳು ತರದ ಸಿಗರೇಟಿನ ಬೆಲೆ ೪೦ ರೂ.ಗಳನೆ. ಒಂದು ಕೋಳಿ ಮರಿಗೆ ೬೦ ರೂ.ಗಳ ಬೆಲೆಯಿದೆ. ೧೦೦೦ದಿಂದ ೧೨೦೦ ರೂ.ಗಳಿಗೆ ಒಂದು ಚೀಲದಂತೆ ದಪ್ಪನ ಅಕ್ಕಿಯು ಮಾರಲಾಗುವುದು. ೫ ರೂ. ಗಳನೋಟಿಯಾವ ಸಾಮಾನನೂ ಸಿಗುವದಿಲ್ಲ.

ಮಡಿಕೇರಿ-ಸುಂಟಿಕೊಪ್ಪ ಭಾಗಮಂಡಲ್ಲನಾಡು ಓಟರುಗಳಲ್ಲಿ ವಿನಂತಿ.

'ಈ ನಾಡಿನ ಪರ ಕೌನ್ಸಿಲಿಗೆ ಉಮೇದು ವಾರರಾಗಿ ನಾವು ಮೂವರು ನಿಂತಿದ್ದೆವು. ಆದರೆ ಇತ್ತಲ್ಲಾಗಿ ಕಂಗ್ರೆಸಿಗೆ ವಿರೋಧ ನಿಲ್ಲುವ ಮನಸ್ಸಿನಲ್ಲದೆ ಶ್ರೀಚಾರಿರ ಮಂದಣನಾಡ ನಾನು ನನ್ನ ಉಮೇದು ವಾರಿಕೆಯನ್ನ ವಾಪಾಸು ತೆಗೆದು ಕೊಂಡಿರುವೆನು. ಆದ್ದರಿಂದ ಓಟರುಗಳು ದಯವಿಟ್ಟು ಶ್ರೀ ಕೋರನ ದೇವಯ್ಯ ಮತ್ತು ಕೊಂಗೆಟ್ಟಿರ ಅಪ್ಪಯ್ಯನಾಪ ನಮಗಳಿಗೆ ಮಾತ್ರ ಓಟು ಮಾಡಬೇಕಾಗಿ ನಾವು ಮೂವರೂ ಮತದಾರರನ್ನು ಕೇಳಿಕೊಳ್ಳುತ್ತೇವೆ.

ಕೊಂಗೆಟ್ಟಿರ ಅಪ್ಪಯ್ಯ.
ಕೋರನ ದೇವಯ್ಯ.
ಚೌರಿರ ಮಂಡಣ್ಣ.

The Canara Banking Corporation Limited.

(Incorporated in British India Liablity of Members is Limited)

24) ESTD—1906.

Head Office: U D I P I, South Kanara.

Authorised Capital	....	Rs. 25,00,000
Issued & Subscribed Capital	....	Rs. 16,00,000
Paid up capital	....	Rs. 14,92,000
Reserves	....	Rs. 4,43,000

Total Working Capital Exceeds:

ONE CRORE & 35 LAKHS.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ.—

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತ್ತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

28) ಪಿ. ಬಿ. ನಂ. 337, ಮದ್ರಾಸು.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

12) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕವ	ಒಟ್ಟು ಆದಾಯ	೯೭,೩೭,೦೦೦ ರೂಪಿದೆ
ರದಿಯಲ್ಲಿನ ಕೆಲವು	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
ಸ್ಪಷ್ಟ ಸಂಗತಿಗಳು.	ಆಸ್ತಿ	೬,೩೦,೪೬,೧೦೦ ,,
ಕಂಪೆನಿಯ ಆದಿಯಲ್ಲಿ	ಕೊಟ್ಟ ಕ್ಲೈಮುಗಳು	೮,೩೮,೦೦,೦೦೦ ,,

ಬಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಆರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಭಾಶ್‌ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀನಸಿನೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ. ನಮ್ಮಲ್ಲಿ ಖಿಜೇರಿ: **ಹೊಸ ಡಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,

10) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,000, ಜಮಾ ಬಂದ ಠೇವಣಾತಿ 2,24.750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿವಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

(1 ನೇ ಪುಟದಿಂದ ಸಾಗಿದ್ದು.)

ಮುಗಿಸಿದ ನಂತರ ತನ್ನ ಹೊಟ್ಟೆ ಹೊರೆಯುವುದಕ್ಕಾಗಿ ಹಿಟ್ಲರನು ವಿಯೆನ್ನಾಕ್ಕೆ ತೆರಳಿದನು. ಚಿತ್ರಕಲೆಯು ಅಭಿರುಚಿಯು ಅವನಿಗಿದ್ದುದರಿಂದ ವಿಯೆನ್ನಾದ ಎಕೆಡಮಿಯಲ್ಲಿ ಚಿತ್ರಕಲೆಯ ಪರೀಕ್ಷೆ ಕೊಟ್ಟನು. ಆದರೆ ಅವನು ತೇರ್ಗಡೆ ಹೊಂದಲಿಲ್ಲ. ಮನೆಗಳಿಗೆ ಬಣ್ಣ ಹಚ್ಚಿ ಹಾಗು ಇಟ್ಟಂಗಿಗಳನ್ನು ಕೂಡಿಸುವ ಉದ್ಯೋಗವನ್ನು ಸಾಗಿಸಿ ಕೆಲವು ದಿನ ಕಳೆದನು. ಹಿಂದಿನ ಮಹಾಯುದ್ಧ ರಂಭವ ವೇಳೆಗೆ ಅವನು ವಿಯೆನ್ನಾದಲ್ಲಿದ್ದನು. ಯುದ್ಧ ಪ್ರಾರಂಭವಾದೊಡನೆ ಸ್ವಯಂ ಸೇವಕನೆಂದು ಅವನು ಯುದ್ಧದಲ್ಲಿ ಸೇರಿಕೊಂಡನು. 1916ರಲ್ಲಿ ಅವನಿಗೆ ಗಾಯವಾಯಿತು. ಆದರಿಂದ ವಾರಾಣ ಹಿಟ್ಲರನು ಪುನಃ 1918ರಲ್ಲಿ ವಾಯುಪ್ರಯೋಗದ ಆಫೀತಕ್ಕೆ ಒಳಬಿದ್ದ ಕೆಲಕಾಲ ತನ್ನ ದೃಷ್ಟಿಯನ್ನು ಕಳೆದುಕೊಂಡನು.

ಯುದ್ಧಾನಂತರದ ಸಂಯುಕ್ತರಾಷ್ಟ್ರಗಳ ವರ್ತನೆಯಿಂದ ಅವನು ಕಡಿಯಂ ತೊಡಗಿದನು. ಗುಪ್ತ ಕಾರಸ್ಥಾನಕ್ಕೆ ಪ್ರಾರಂಭವಾಯಿತು. ಡೆಸ್ಸಲರನ ನೇತೃತ್ವದಲ್ಲಿ ಕಾರ್ಯ ಸಾಗಿಸುತ್ತಿದ್ದ ಜರ್ಮನ್ ಲೇಬರ್ ಪಾರ್ಟಿಯನ್ನು ಹಿಟ್ಲರನು ಸೇರಿ ಆ ಪಾರ್ಟಿಯನ್ನು ಸಂಪೂರ್ಣ ತನ್ನ ಕಡೆಗೆ ಎಳೆದುಕೊಂಡು ತೆದಾ ಸಂಘಟನೆಗೆ ಮಾಡಲು ಮಾಡಿದನು. ಇದರ ಪರಿಣಾಮವಾಗಿ ಅವನಲ್ಲಿ ಸ್ವಾಭಿಮಾನವು ಮನೆಮಾಡಿತು. 1923ರ ನವಂಬರಲ್ಲಿ ಅಧಿಕಾರವನ್ನು ತನ್ನ ಕಡೆಗೆ ಎಳೆದುಕೊಳ್ಳಲು ಹಿಟ್ಲರನು ಪ್ರಯತ್ನ ನಡೆಸಿ ಅಪಜಯಸ್ವಿಯಾಗಿ 5 ವರ್ಷಗಳ ಶಿಕ್ಷೆಗೆ ಗುರಿಯಾದನು. ಆದರೆ 9 ತಿಂಗಳ ಅವಧಿಯಲ್ಲಿ ಅವನ ಬಿಡುಗಡೆಯಾಯಿತು. ತದನಂತರ ಹಿಟ್ಲರನು ಅಧಿಕಾರವನ್ನು ತನ್ನ ಕಡೆಗೆ ಬರಮಾಡಿಕೊಳ್ಳುವ ಒಂದೇ ಒಂದು ದೃಷ್ಟಿಯಿಂದ ಆಹೋರಾತ್ರಿ ಪಡಪಡಿಸಿ ತಾ. 30-1-33ನೇ ದಿನ ಕೃತಕೃತ್ಯನಾಗಿ ಚಾನ್ಸಲರನಾದನು ತಾ. 2-8-1934ರಲ್ಲಿ ಹಿಡೆನಬರ್ಗನು ಮರಣ ಹೊಂದಿದ ತರುವಾಯ ಜರ್ಮನಿಯ ಸರ್ವಾಧಿಕಾರತ್ವವು ಹಿಟ್ಲರನ ಕಡೆಗೆ ಸರಿಯಿತು.

ಅಧಿಕಾರಾರೂಢನಾದ ನಂತರ ಹಿಟ್ಲರನು ಜರ್ಮನಿಯ ಗತಸಾಮ್ರಾಜ್ಯ ವೈಭವವನ್ನು ಪುನಃ ಕಟ್ಟುವುದಕ್ಕಾಗಿ ಪಡಿಯಂ ತೊಡಗಿದನು. ಸಮಗ್ರ ಜಗತ್ತೇ ದಂಗುಬಡುವಂತಹ ಚತುರೋಪಾಯವನ್ನು ಹಿಟ್ಲರನು ರಣಭೂಮಿಯಲ್ಲಿ ತೋರಿಸಿ ಹಲ ಸಾಮ್ರಾಜ್ಯಗಳ ಬಾಧವನ್ನು ಅಲ್ಲಾಡಿಸಿದನು. ರಶಿಯಾದ ಪ್ರತಿಭಟನೆಯು ಪ್ರಾರಂಭವಾಗುವುದಕ್ಕೆ ಹೋದಲ್ಲಿ ಇಟ್ಟ ಹೆಜ್ಜೆಗೆ ಜಯಶ್ರೀಯು ಅವನಿಗೊಲಿದಳು. ಆದರೆ ಈ ಜಯವು ಶಾಶ್ವತವಾಗಿ ಉಳಿಯಲಿಲ್ಲ, ಉಳಿಯುವುದೂ ಶಕ್ಯವಿದ್ದಿಲ್ಲ. ಜಪಾನವು ಕೊಟ್ಟ ವಚನವನ್ನು ಪಾಲಿಸಿದ್ದರಿಂದ ಹಾಗು ಮುಸೊಲಿನಿಯು ಕಾರ್ಯಕ್ಷಮನಾಗಿದ್ದರಿಂದ ಹಿಟ್ಲರನು ಪುನಃ ಒಂದಿಯಾಗಿ ಕಾದುವ ಪ್ರಸಂಗವು ಬಂದೊದಗಿತು. ಈ ಅವಕಾಶದ ಲಾಭವನ್ನು ಸಂಯುಕ್ತರಾಷ್ಟ್ರಗಳು ಸಾಧಿಸಿ ಅವನನ್ನು ಇಂದು ಇಲ್ಲದಂತೆ ಮಾಡಿವೆ.

ತನ್ನ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ಅಸ್ತಿತ್ವಕ್ಕಾಗಿ ಮತ್ತು ಅಭ್ಯುದಯಕ್ಕಾಗಿ ಏನಕೇನ ಪ್ರಕಾರೇಣ ಹೋರಾಡಿದ್ದುದರಲ್ಲಿ ಯಾವುದು ಅನಾಗರಿಕವಾದರೆ ಹಿಟ್ಲರನಷ್ಟು ಅನಾಗರಿಕ ವ್ಯಕ್ತಿಯು ಬೇರೊಬ್ಬನಿಲ್ಲ. ಯುದ್ಧದಲ್ಲಿ ಸಾಮ, ದಾನ, ದಂಡ ಭೇದ ಈ ಚತುರೋಪಾಯಗಳನ್ನೂ ಉಪಯೋಗಿಸುವುದು ಅತ್ಯವಶ್ಯವಿದ್ದರೆ ಹಿಟ್ಲರನಷ್ಟು ಅವ್ಯವಹಾರಿಯು ಬೇರೊಬ್ಬನಿಲ್ಲ. ತನಗಾದ ದೌರ್ಬಲ್ಯವನ್ನು ಜಗತ್ತಿನ ಕಣ್ಣಿಂದ ಇಟ್ಟು ಅದರ ನಿವಾರಣೆಗಾಗಿ ಯತ್ನಿಸುವುದು ಆ ಪ್ರಾಸಂಗಿಕವಾದರೆ ಹಿಟ್ಲರನು ಅಧಿಕ ಪ್ರಸಂಗಿಯೇ ಸರಿ. ನಮ್ಮ ದೃಷ್ಟಿಯಿಂದ ಹಿಟ್ಲರನು ಹಾಗೆಕಂಡರೂ ಜನ್ಮನರ ದೃಷ್ಟಿಯಿಂದ ಅವನು ಮಹಾತ್ಯಾಗಿ ಹಾಗು ಕರ್ಮವೀರನಾಗಿರುವನು.

ಇನ್ನೊಂದು ವಿಷಯ. ಅಮಾನುಷ ಕೃತಿಗಳನ್ನು ಹಿಟ್ಲರನು ತಾನು ಗೆದ್ದ ರಾಷ್ಟ್ರಗಳಲ್ಲಿ ನಡೆಸಿದನೆಂದು ಹೇಳಲಾಗುತ್ತಿದೆ. ಹೌದು; ಅವು ಇಂತಹ ಕೆಟ್ಟ ಕೃತಿಗಳಿಗೆ ಶೈಹಕೆದ್ದವು. ಆದರೆ ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡಾ ನಾಗರಿಕರೆಂದು ಹೇಳಿಕೊಳ್ಳುತ್ತಿರುವ ಆಂಗ್ಲೋ ಜನಾಂಗವು ಪರಕೀಯ ಜನಾಂಗಗಳನ್ನು ಅಲ್ಲಲ್ಲಿನ ಪೆಸಿಪಿಕೊಳ್ಳುತ್ತಿರುವ ರೀತಿ ನೀತಿಯನ್ನು ನೋಡಿದರೆ, ಹಿಟ್ಲರನ ಕ್ರೌರ್ಯವು ಇವರ ಈ ಕೌಶಲ್ಯದ ಎದುಟ್ಟಲಾರದು. ನಿರುಪದ್ರವವಾದ ಅಂಚೆಕಾರ್ಡೊಂದನ್ನು ಬರೆಯಲೆಂದು ಮುಸೊಲಿನಿಯು ಅತ್ಯಾಚಾರಗಳನ್ನು ನಡೆದಾಗ ಈಗಹಿಟ್ಲರನ ಕೃತ್ಯಗಳನ್ನು ಖಂಡಿಸುತ್ತಿರುವರೇ ಸುಮ್ಮನಿರಲಿಲ್ಲವೇ?

ಸಂ. ಗ.

ಮಾರಾಟಕ್ಕಿದೆ.

ಮಡಿಕೇರಿ ಪಟ್ಟಣದಿಂದ ಮೂರು ಮೈಲಿ ದೂರದಲ್ಲಿರುವ ಬ್ಲಾಕ್ ನಂ. ೪ ಸರ್ವೆ ನಂ. 85 ರ, ವಾಸಕ್ಕೂ ಅಂಗಡಿ ಹಾಳಿಗೆಗೂ ಅನುಕೂಲವಾಗಿರುವಲ್ಲಿ, ಹಿತ್ತಲು, ಕೊಟ್ಟಿಗೆ ಇವುಗಳಿಂದ ಕೂಡಿರುವ ವಿದ್ಯುತ್ ದೀಪಗಳಿರುವ ಒಂದು ದೊಡ್ಡ ಮನೆಯು (ಈಗಿನ Warunny Dispensary) ಮನೆಯು ಹೊರಾಟಕ್ಕಿದೆ. ಬೇಕಾದವರು ಈ ಕೆಳಗಿನ ವಿಳಾಸದವರನ್ನು ವಿಚಾರಿಸಿ.

C/o. "ಕೊಡಗು"
ಮಡಿಕೇರಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.